270 (770) – ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ, ರಬಕವಿ, ಬನಹಟ್ಟಿ ಮತ್ತು ತೆರದಾಳ ನಗರಗಳಲ್ಲಿ ಅರಣ್ಯ ಪ್ರದೇಶದಲ್ಲಿ ಸುಮಾರು 40 ವರ್ಷಗಳಿಂದ ಸಾವಿರಾರು ಕುಟುಂಬಗಳು ವಾಸಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ಇವರಿಗೆಲ್ಲ ಪಟ್ಟಾ ಕೊಡಲು ಸಾಧ್ಯವೇ; ಹಾಗಿಲ್ಲದಿದ್ದಲ್ಲಿ, ಅವರುಗಳನ್ನು ಎಲ್ಲಿಗೆ ಸ್ಥಳಾಂತರಿಸಲಾಗುವುದು ?

ಶ್ರೀ ಸಿ. ಚನ್ನಿಗಪ್ಪ (ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು)–

ಅ) 863 ಕುಟುಂಬಗಳು 1978ರ ನಂತರ ವಾಸಿಸುತ್ತಿರುವುದು ಕಂಡು ಬಂದಿದೆ.

ಆ) ಇಲ್ಲ. ಅರಣ್ಯ ಸಂರಕ್ಷಣಾ ಕಾಯ್ದೆ 1980 ರ ಪ್ರಕಾರ ಪಟ್ಟಾ ಕೊಡುವ ಅವಕಾಶವಿರುವುದಿಲ್ಲ.

272 (773) – ಶ್ರೀ ಸಿದ್ದು ಸಾವದಿ (ಜಮಖಂಡಿ) – ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಜಮಖಂಡಿ ತಾಲ್ಲೂಕಿನಲ್ಲಿ ದಿನಾಂಕ: 01.04.2003 ರಿಂದ ಇಲ್ಲಿಯವರೆಗೆ ಸಣ್ಣ ನೀರಾವರಿ ಇಲಾಖೆಯಿಂದ ಕೈಗೆತ್ತಿಕೊಂಡ ಅಭಿವೃದ್ಧಿ ಕೆಲಸಗಳಾವುವು ಹಾಗೂ ಅವು ಯಾವ ಹಂತದಲ್ಲಿವೆ ;

ಆ) ಅವುಗಳಿಗೆ ಮಂಜೂರಾದ ಹಣವೆಷ್ಟು ಹಾಗೂ ಆ ಅಭಿವೃದ್ಧಿ ಕೆಲಸಗಳಿಗೆ ಖರ್ಚಾದ ಮತ್ತು ಉಳಿದ ಹಣವೆಷ್ಟು ; (ಸಂಪೂರ್ಣ ವಿವರ ಒದಗಿಸುವುದು) ;

ಇ) ಕೆರೆ ತುಂಬಿಸುವ ಯೋಜನೆಯಲ್ಲಿ ಜಮಖಂಡಿ ಕ್ಷೇತ್ರದಲ್ಲಿ ಯಾವ ಯಾವ ಕೆರೆಗಳನ್ನು ತುಂಬಿಸಲು ಸರ್ಕಾರ ತೀರ್ಮಾನಿಸಿದೆ ಹಾಗೂ ಈ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು ;

ಈ) ಜಮಖಂಡಿ ಕ್ಷೇತ್ರದಲ್ಲಿರುವ ಒಟ್ಟು ಕೆರೆಗಳೆಷ್ಟು ಹಾಗೂ ಅವುಗಳ ವಿಸ್ತೀರ್ಣವೆಷ್ಟು (ಪಟ್ಟಿ ಒದಗಿಸುವುದು) ;

ಉ) ಈ ಕೆರೆಗಳಲ್ಲಿ ಒತ್ತುವರಿಯಾಗಿರುವ ವಿಸ್ತೀರ್ಣವೆಷ್ಟು ಹಾಗೂ ಒತ್ತುವರಿಯನ್ನು ತೆರವುಗೊಳಿಸಲು ಸರ್ಕಾರ ಕೈಗೊಂಡ ಕ್ರಮಗಳೇನು; (ಕೆರೆವಾರು ವಿವರ ನೀಡುವುದು) ?

ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಸಣ್ಣ ನೀರಾವರಿ ಸಚಿವರು)–

ಅ) ಮತ್ತು ಆ) ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಇ) ಕಲಹಳ್ಳಿ ಕೆರೆ ಮತ್ತು ತುಂಗಳ ಕೆರೆಗಳನ್ನು ತುಂಬಿಸುವ ಯೋಜನೆಯಿದ್ದು, ಈ ಕಾರ್ಯವನ್ನು ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತದಿಂದ ಕೈಗೊಳ್ಳಲಾಗುವುದು. ಯೋಜನೆಯು ಪ್ರಾರಂಭಿಕ ಹಂತದಲ್ಲಿರುವುದರಿಂದ, ಪೂರ್ಣಗೊಳಿಸುವ ನಿರ್ದಿಷ್ಟ ಅವಧಿಯನ್ನು ಈ ಹಂತದಲ್ಲಿ ತಿಳಿಸಲು ಸಾಧ್ಯವಾಗುವುದಿಲ್ಲ.

ಈ) ಈ ಕ್ಷೇತ್ರದಲ್ಲಿ 2 ಕೆರೆಗಳಿದ್ದು,

1. ಕಲಹಳ್ಳಿ ಕೆರೆ, ವಿಸ್ತೀರ್ಣ 2.00 ಚದರ ಮೈಲಿಗಳು
2. ತುಂಗಳ ಕೆರೆ, 4.10 ಚದರ ಮೈಲಿಗಳು.

ಉ) ಈ ಕೆರೆಗಳಲ್ಲಿ ಯಾವುದೇ ಒತ್ತುವರಿ ಆಗಿರುವುದಿಲ್ಲ.

ವಿಧಾನ ಸಭಾ ಸದಸ್ಯರಾದ ಶ್ರೀ ಸಿದ್ದು ಸಾವದಿ ರವರ ಚುಕ್ಕೆ ಗುರುತಿಲ್ಲದ ಪ್ರಸಂ. 773ಕ್ಕೆ ಅನುಬಂಧ

ದಿನಾಂಕ: 01.04.2004ರಿಂದ ಇಲ್ಲಿಯವರೆಗೆ ಜಮಖಂಡಿ ತಾಲ್ಲೂಕಿನಲ್ಲಿ ಕಾಮಗಾರಿಗಳಿಗೆ ಖರ್ಚಾದ ವಿವರ

(ಲಕ್ಷ ರೂ.ಗಳಲ್ಲಿ)

ಕ್ರ. ಸಂ.	ಕಾಮಗಾರಿಯ ಹೆಸರು	ಅಂದಾಜು ಮೊತ್ತ	ಅಚ್ಚುಕಟ್ಟು (ಹೆಕ್ಟೇರ್ ಗಳಲ್ಲಿ)	ಖರ್ಚಾದ ಹಣ	ಕಾಮಗಾರಿ ಹಂತ
1	ಕಲಹಳ್ಳಿ ಕೆರೆ ನಿರ್ಮಾಣ	35.00	40	35.00	ಕೆಲಸ ಮುಗಿದಿದೆ
2	ರಹಮತಪೂರ ಬಂದಾರಾ ನಿರ್ಮಾಣ	36.63	40	36.63	ಕೆಲಸ ಮುಗಿದಿದೆ
3	ಅಡಿಹುಡಿ ತೊದಲಬಾಗಿ ಏತ ನೀರಾವರಿ ಯೋಜನೆ ಪುನಶ್ಚೇತನ	12.00	1490	12.00	ಕೆಲಸ ಮುಗಿದಿದೆ
	ಒಟ್ಟು	33.63	1570	83.63	

2006–07ನೇ ಸಾಲಿನಲ್ಲಿ ಕೈಗೊಳ್ಳಲಾಗುತ್ತಿರುವ ಹೊಸ ಕಾಮಗಾರಿಗಳು:					
1	ಕನ್ನೊಳ್ಳಿ ಹತ್ತಿರ ಜಿನುಗು ಕೆರೆ (ಸೈಟ್–1)	40.00	45	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
2	ಸಾವಳಗಿ ಹತ್ತಿರ ಜಿನುಗು ಕೆರೆ	34.00	40	–	ಟೆಂಡರ್ ಪ್ರಕ್ರಿಯೆ ಪ್ರಗತಿಯಲ್ಲಿದೆ
3	ತುಂಗಳ ಹತ್ತಿರ ಜಿನುಗು ಕೆರೆ	30.00	40	–	– " –
4	ತುಂಗಳ ಹತ್ತಿರ ನವಲಿ ಹತ್ತಿರ ಜಿನುಗು ಕೆರೆ	50.00	45	–	– " –
5	ಕುರುಗೊಡ (ಸೈಟ್–2) ಹತ್ತಿರ ಜಿನುಗು ಹತ್ತಿರ	35.00	40	–	– " –
6	ನವಲಗಿ ಹತ್ತಿರ ಜಿನುಗು ಕೆರೆ	0.00	0	–	ಸರ್ವೆ ಕೆಲಸ ನಡೆದಿದೆ.
7	ಚಿಮ್ಮಡ ಹತ್ತಿರ ಕೆರೆ	0.00	0	–	– " –
	ಒಟ್ಟು	129.00	210	–	

274 (609) – ಶ್ರೀ ಸಿಂಧೂರ ಜಿ. ರಾಜಶೇಖರ (ಶಿಗ್ಗಾಂವ್) – ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗು ಸಣ್ಣ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸವಣೂರು ತಾಲ್ಲೂಕಿನಲ್ಲಿ ನೀರಾವರಿ ಕೃಷಿ ಭೂಮಿ ಅತೀ ಕಡಿಮೆ ಇರುವುದರಿಂದ ಹೆಚ್ಚಿನ ಪ್ರಮಾಣದಲ್ಲಿ ನೀರಾವರಿ ಕೃಷಿ ಮಾಡಲು ವರದಾ ನದಿಯಿಂದ ಏತ ನೀರಾವರಿ ಮೂಲಕ ನೀರೊದಗಿಸಿ ರೈತರಿಗೆ ಅನುಕೂಲ ಮಾಡುವ ಯೋಜನೆ ಸರ್ಕಾರಕ್ಕೆ ಇದೆಯೇ ;